"ಯಾವ ಬಗೆಯ ಶಿಕ್ಷಣದಿಂದ
ಶೀಲ ರೂಪಗೊಳ್ಳುವುದೋ,
ಬುದ್ಧಿ ವಿಕಾಸಗೊಳ್ಳುವುದೋ ಮತ್ತು
ಯಾವುದರಿಂದ ನಮ್ಮ ಸ್ವಂತ ಕಾಲ ಮೇಲೆ
ನಾವು ನಿಂತುಕೊಳ್ಳಬಲ್ಲೆವೋ,
ಅಂತಹ ಶಿಕ್ಷಣ ನಮಗೆ ಅವಶ್ಯಕ"

– ಸ್ವಾಮಿ ವಿವೇಕಾನಂದ



## ಅನಿಸಿಕೆಗಳು

ನಮ್ಮ ವಿದ್ಯಾರ್ಥಿಗಳಲ್ಲಿ ಸೂಕ್ಷ್ಮತೆ, ಶಿಸ್ತು, ದೇಶಭಕ್ತಿ, ರಾಷ್ಟ್ರ ಜಾಗೃತಿ ಮತ್ತು ಸಾಂಸ್ಕೃತಿಕ ಪರಂಪರೆಯ ಅರಿವು ಮೂಡಿಸುವಲ್ಲಿ ವಿವೇಕ ವಿಕಾಸ ಯಶಸ್ವಿಯಾಗಿದೆ.

– ಪ್ರಾಂಶುಪಾಲರು, ಅಹಲ್ಯಾ ಬಾಯಿ ಪ್ರೌಢಶಾಲೆ

ವಿದೇಶದಲ್ಲಿ ನೆಲೆಸಲು ಇಚ್ಛಿಸಿದ ನಾನು, ಈ ಕಾರ್ಯಕ್ರಮದ ನಂತರ ಭಾರತದಲ್ಲೇ ಉಳಿದು ಭಾರತ ಮಾತೆಯ ಸೇವೆ ಮಾಡುವ ಪ್ರತಿಜ್ಞೆ ಮಾಡಿದ್ದೇನೆ.

– ವರ್ಷ, ಅರಬಿಂದೋ ಪ್ರೌಢಶಾಲೆ

ಜೀವನದ ಗುರಿ, ಯಶಸ್ಸಿನ ದಾರಿಯ ಸೂತ್ರಗಳು ಮತ್ತು ಸ್ವಾತಂತ್ರ್ಯ ಯೋಧರ ಕಥೆಗಳು, ಉತ್ಸಾಹದಾಯಕವಾಗಿದ್ದವು. ಕಾರ್ಯಕ್ರಮವು ಸಂವಾದ ಹಾಗೂ ಚಟುವಟಿಕೆಗಳಿಂದ ಕೂಡಿದ್ದು ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ಕೊಟ್ಟವು.

– ಸಂದೀಪ್, ಮೂಕಾಂಬಿಕಾ ಪ್ರೌಢಶಾಲೆ

ನಾಯಕತ್ವದ ಗುಣಗಳು, ಅನುಶಾಸನ ದೇಶಭಕ್ತಿ, ಸ್ವಾಭಿಮಾನ ಈ ಗುಣಗಳನ್ನು ರೂಪಿಸುವಲ್ಲಿ ವಿವೇಕ ವಿಕಾಸ ಯೋಜನೆಯು ದಿಟ್ಟ ಹೆಜ್ಜೆಯಾಗಿದೆ. ಸಂಪನ್ಮೂಲ ವ್ಯಕ್ತಿಗಳ ಭಾಷಣ, ಸಂವಾದಗಳು ಚೈತನ್ಯದಾಯಕವಾಗಿದ್ದವು.

– ಮುಖ್ಯೋಪಾಧ್ಯಾಯರು, ಮಹಿಳಾ ಮಂಡಳಿ ಪ್ರೌಢಶಾಲೆ


# ದಿಶಾ

ಮೌಲ್ಯಾಧಾರಿತ ಚಟುವಟಿಕೆಗಳೊಂದಿಗೆ
ಸಮಗ್ರ ಶಿಕ್ಷಣದತ್ತ

ವಿಳಾಸ:
ವಿವೇಕ ವಿಕಾಸ, ದಿಶಾ ಸಂಸ್ಥೆಯ ಪ್ರಕಲ್ಪ
ನಂ. 57/3, ಮಾರ್ಗೋಸಾ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು–85

98860 42333 (ಪ್ರದೀಪ್)
99809 00075 (ಪರಿಮಳಾ ಮೂರ್ತಿ)
94800 80276 (ತುಲಜಾ ಭವಾನಿ)
99163 81599 (ಪ್ರಮೋದ್)
94490 16853 (ಪದ್ಮಾಕ್ಷಿ ವೈದ್ಯ)
vivekavikasa@gmail.com
www.dishabharat.org/vivekavikasa
Viveka vikasa




# ವಿವೇಕ ವಿಕಾಸ

ಸಮಗ್ರ ಶಿಕ್ಷಣದಿಂದ ಸಮರ್ಥ ಭಾರತದತ್ತ
(ದಿಶಾ ಸಂಸ್ಥೆಯ ಪ್ರಕಲ್ಪ)




ಸಂಸ್ಕೃತಿ
ಅರಿವು
ಸಂಸ್ಕಾರ

## ವಿವೇಕ ವಿಕಾಸ ಏಕೆ?

ರಭಸದ ಜಗತ್ತಿನಲ್ಲಿ ಶಿಕ್ಷಣ ಕ್ಷೇತ್ರವು ವೇಗವಾಗಿ ಸ್ಪರ್ಧೆಯಲ್ಲಿದೆ. ಪರಿಣಾಮವಾಗಿ ಲಕ್ಷಾಂತರ ಯುವಕರು ಅಕ್ಷರಸ್ಥರಾಗಿ ಕೇವಲ ಪ್ರಾಪಂಚಿಕ ಅವಶ್ಯಕತೆಗಳನ್ನು ಪೂರೈಸುವ, ಧನಲಾಭವೇ ಉಸಿರಾಗಿರುವ ಉದ್ಯೋಗಗಳಲ್ಲಿದ್ದಾರೆ.

ಆದರೆ ಇಂದಿನ ಶಿಕ್ಷಣವು ವ್ಯಕ್ತಿಯ ಚಾರಿತ್ರ್ಯ ಹಾಗೂ ಅಂತಃಸತ್ವವನ್ನು ಬಲಗೊಳಿಸುವ ಮೂಲಕ ಸಮಾಜ ರಚನಾತ್ಮಕ ಪರಿವರ್ತನೆಯೆಡೆಗೆ ಸಾಗುತ್ತಿದೆಯೇ? ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಆದ್ದರಿಂದ ಶಾಲಾ-ವಿದ್ಯಾಲಯದಲ್ಲಿನ ಶಿಕ್ಷಣದ ಜೊತೆಗೆ ಸಂಸ್ಕೃತಿ, ಸಂಸ್ಕಾರ, ಸಚ್ಚಾರಿತ್ರ್ಯ, ದೇಶಭಕ್ತಿ, ಸೇವೆ ಇತ್ಯಾದಿ ಭಾರತೀಯ ಮೌಲ್ಯಗಳನ್ನು ಶಿಕ್ಷಣದೊಡನೆ ಜೋಡಿಸುವ ತುರ್ತು ಅವಶ್ಯಕತೆಯಿದೆ. ಭವ್ಯ ಭಾರತದ ವೈವಿಧ್ಯಮಯ ಸಂಸ್ಕೃತಿಯನ್ನು, ಏಕತೆಯನ್ನು ಅಳೈಸುವುದೇ ಮೌಲ್ಯಾಧಾರಿತ ಶಿಕ್ಷಣದ ಬುನಾದಿ. ಈ ಸಾರ್ವಕಾಲಿಕ ಮೌಲ್ಯಗಳು ಮತ್ತು ಪ್ರಾಯೋಗಿಕ ವಿಚಾರಗಳನ್ನು ಮನದಟ್ಟು ಮಾಡುವುದೇ ಪರಿಪೂರ್ಣ ಶಿಕ್ಷಣ. ಈ ಶಿಕ್ಷಣದಿಂದ ಯುವ ಜನತೆಯು ಉತ್ತಮ ಪ್ರಜೆಗಳಾಗಿ, ತನ್ಮೂಲಕ ಸಮಾಜವು ಅಭ್ಯುದಯ ಹೊಂದಿ, ರಾಷ್ಟ್ರವು ಬಲಿಷ್ಠವಾಗುವುದರಲ್ಲಿ ಸಂದೇಹವಿಲ್ಲ.

## ವಿವೇಕ ವಿಕಾಸ – ಪರಿಚಯ

"ವಿವೇಕ ವಿಕಾಸ"ವು ಮೇಲಿನ ಅವಶ್ಯಕತೆಯನ್ನು ಪೂರೈಸುವ ಯೋಜನೆಯಾಗಿದೆ. ಮೌಲ್ಯಾಧಾರಿತ ಶಿಕ್ಷಣವನ್ನು ವಾಹಕವಾಗಿಟ್ಟುಕೊಂಡು ಯುವಕರಲ್ಲಿ ಉತ್ಸಾಹ ತುಂಬಿ, ಅವರನ್ನು ಸಚೇತನಗೊಳಿಸಿ ಭಾರತದ ಭವ್ಯ ಪರಂಪರೆಯತ್ತ ಮುನ್ನಡೆಸುವಲ್ಲಿ "ವಿವೇಕ ವಿಕಾಸ"ವು ದಾರಿದೀಪವಾಗಿದೆ. ವಿವೇಕ ವಿಕಾಸದ ವಿವಿಧ ಕಾರ್ಯಾಗಾರಗಳ ಮೂಲಕ ಶಾರೀರಿಕ, ಮಾನಸಿಕ, ಬೌದ್ಧಿಕ, ಸಾಮಾಜಿಕ, ಅಧ್ಯಾತ್ಮಿಕ ಬೆಳವಣಿಗೆಗಳು ಕಾರ್ಯೋನ್ಮುಖವಾಗಲಿದೆ.

**ಧ್ಯೇಯ:** ವ್ಯಕ್ತಿ ನಿರ್ಮಾಣವೇ ರಾಷ್ಟ್ರ ನಿರ್ಮಾಣ

**ಧ್ಯೇಯವನ್ನು ಸಾಧಿಸುವ ಬಗೆ:** ವಿದ್ಯಾರ್ಥಿಗಳಲ್ಲಿ ಈ ಕೆಳಗಿನ ಅಂಶಗಳ ಅರಿವು ಮೂಡಿಸುವುದು.

- ✔ ಮೌಲ್ಯಗಳ ಮೌಲ್ಯ.
- ✔ ಶಿಕ್ಷಣದ ಉದ್ದೇಶ ಹಾಗೂ ಜೀವನದ ಗುರಿ.
- ✔ ನಮ್ಮ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆ ಬಗ್ಗೆ ಅಭಿಮಾನ.
- ✔ ನಮ್ಮ ದೇಶದ ಮೂಲ ತತ್ವ, ಆದರ್ಶಗಳ ತಳಹದಿಯ ಮೇಲೆ ಸಂತುಲಿತ ಜೀವನ ನಡೆಸಲು ಪ್ರೇರಣೆ.

ಈ ಧ್ಯೇಯವನ್ನು ಸಾಕಾರಗೊಳಿಸುವಲ್ಲಿ ನಮ್ಮಲ್ಲಿ ಸಂಪನ್ಮೂಲ ವ್ಯಕ್ತಿಗಳ ಮತ್ತು ಸ್ವಯಂಸೇವಕರ ತಂಡವಿದೆ.

## ವಿವೇಕ ವಿಕಾಸ ಯಾರಿಗೆ, ಹೇಗೆ?

ಪ್ರೌಢಶಾಲಾ ಹಾಗೂ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು.

### 1. ಅರಳು – ಮಕ್ಕಳಿಗೆ ನಿರಂತರವಾಗಿ ನಡೆಯುವ ಅವಧಿಗಳು

ತರಗತಿಗಳು: 45 ನಿಮಿಷದ 10 ತರಗತಿಗಳು (ಹದಿನೈದು ದಿನಕ್ಕೊಮ್ಮೆ). ಈ ತರಗತಿಗಳ ವೈಶಿಷ್ಟ್ಯ:

- ✔ ಕಥೆಗಳು, ಮಹಾಪುರುಷರ ಜೀವನದ ಪ್ರೇರಣದಾಯಿ ಘಟನೆಗಳು
- ✔ ಸಾಮೂಹಿಕ ರಚನಾತ್ಮಕ ಚಟುವಟಿಕೆಗಳು, ಆಟಗಳು
- ✔ ಸಂವಾದ – ಚರ್ಚೆಗಳು
- ✔ ದೃಶ್ಯಾವಳಿಗಳು, ರೂಪಕಗಳು
- ✔ ಆಪ್ತಸಲಹೆ



ಪ್ರಭಾವಿ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರಿಂದ ಸ್ಫೂರ್ತಿಯುತ 'ಭಾರತ ದರ್ಶನ' ಭಾಷಣ



ತೇಪೆಗಾರಿಕೆ *(Collage)* ಚಟುವಟಿಕೆಯಲ್ಲಿ ತೊಡಗಿರುವ ಬಿಪ್ ಶಾಲೆಯ ಮಕ್ಕಳು

### 2. ಜಾಗೃತಿ – ಅರ್ಧ ದಿನದ ಕಾರ್ಯಾಗಾರ (3 ಗಂಟೆಗಳು)

ಅರ್ಧದಿನದ ಎರಡು ಕಾರ್ಯಾಗಾರಗಳ ಮೂಲಕ ಮಕ್ಕಳ ಅಂತಃಸತ್ವವನ್ನು ಜಾಗೃತಿಗೊಳಿಸಲಾಗುವುದು.

- ✔ ದೃಶ್ಯಾವಳಿಗಳು, ಸಂವಾದ, ಕಥೆ ಮತ್ತು ಪ್ರೇರಣಾದಾಯಿ ಘಟನೆಗಳು, ಆಟಗಳು, ಚಟುವಟಿಕೆಗಳ ಮೂಲಕ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಸನ.
- ✔ ದೇಶ, ಸಂಸ್ಕೃತಿ ಮತ್ತು ಚಾರಿತ್ರ್ಯ ನಿರ್ಮಾಣಕ್ಕೆ ಸಂಬಂಧಿಸಿದ ಚಿತ್ರ ಪ್ರದರ್ಶನ ಇರುತ್ತದೆ.



ಯೋಗಾಭ್ಯಾಸದಲ್ಲಿ ನಿರತರಾಗಿರುವ ವಿದ್ಯಾರ್ಥಿಗಳು



'ನನ್ನ ಯಶಸ್ಸು' ವಿಷಯ ಸಂವಾದದಲ್ಲಿ ಪಾಲ್ಗೊಂಡಿರುವ ಮಕ್ಕಳು

### 3. ಶಿಕ್ಷಕನು ಗುರುವಾಗುವ ಬಗೆ – ಶಿಕ್ಷಕರ ಅರ್ಧ ದಿನದ ಕಾರ್ಯಾಗಾರ (3 ಗಂಟೆಗಳು)

ಪ್ರಾಚೀನ ಕಾಲದಿಂದ ಸಮಾಜದ ನಿರ್ಮಾಣದಲ್ಲಿ ಗುರುವಿನ ಪಾತ್ರ ಮಹತ್ತರವಾಗಿದೆ. ಗುರುವಿನ ಜ್ಞಾನ ಹಾಗೂ ನಿದರ್ಶನದ ಬದುಕು ಅಸಂಖ್ಯ ವ್ಯಕ್ತಿಗಳ ಜೀವನದಲ್ಲಿ ಪರಿವರ್ತನೆ ತಂದು ಸಾಮಾಜಿಕ ಮೌಲ್ಯಗಳ ಸಂರಕ್ಷಣೆ ಮಾಡಿದೆ.

ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಕನೊಬ್ಬ ಗುರುವಿನ ಎತ್ತರಕ್ಕೇರುವುದು ಅತ್ಯಗತ್ಯವಾಗಿದೆ. ವಿದ್ಯಾರ್ಥಿಗಳು ಶಿಕ್ಷಕನನ್ನೇ ತಮ್ಮ ಆದರ್ಶ ವ್ಯಕ್ತಿಯನ್ನಾಗಿ ಕಾಣುವರು. ಆದ್ದರಿಂದ ಈ ನಿಟ್ಟಿನಲ್ಲಿ ಯುವಜನಾಂಗವನ್ನು ರೂಪಿಸುವಲ್ಲಿ ಶಿಕ್ಷಕನ ಹೊಣೆಗಾರಿಕೆ ಅತ್ಯಂತ ಪ್ರಮುಖವಾಗಿದೆ.

ಕಾರ್ಯಕ್ರಮದ ಉದ್ದೇಶ : ಕೆಳಗಿನ ಶಿಕ್ಷಕರ ಜವಾಬ್ದಾರಿಗಳನ್ನು ಮನದಟ್ಟು ಮಾಡುವುದು.

- ✔ ಮೌಲ್ಯಗಳ ವಾರಸುದಾರಿಕೆ (ಸಂರಕ್ಷಣೆ)
- ✔ ವಿದ್ಯಾರ್ಥಿಯ ಮನಸ್ಸಿನ ಮೇಲೆ ಪ್ರಭಾವ ಬೀರುವುದು
- ✔ ಮುಂದಿನ ಜನಾಂಗದ ನಾಯಕರ ನಿರ್ಮಾಣ ಮಾಡುವುದು
- ✔ ರಾಷ್ಟ್ರ ಪರಿವರ್ತನೆ



ಮೂಕಾಂಬಿಕಾ ಶಾಲೆಯ ಶಿಕ್ಷಕರ ಕಾರ್ಯಾಗಾರದಲ್ಲಿ ಡಾ|| ವಿ.ಬಿ. ಆರತಿ



ಶಿಕ್ಷಕರು ಚಟುವಟಿಕೆಯಲ್ಲಿ ತೊಡಗಿರುವುದು

### 4. ಪೋಷಕರಿಗಾಗಿ ಚೇತೋಹಾರಿ ಕಾರ್ಯಾಗಾರ (2 ಗಂಟೆಗಳು)

ಮಕ್ಕಳ ಸಂಸ್ಕಾರ ವರ್ಧನೆಯಲ್ಲಿ ಪೋಷಕರ ಹಾಗೂ ಕುಟುಂಬಗಳ ಪಾತ್ರ ಪ್ರಮುಖವಾದುದು. "ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು" ಎಂಬ ಕವಿವಾಣಿಯ ಭಾವವನ್ನೇ ಆಧಾರವಾಗಿಟ್ಟುಕೊಂಡು ಈ ಯೋಜನೆಯನ್ನು ರೂಪಿಸಲಾಗಿದೆ. ಚಾರಿತ್ರ್ಯಬಲ, ಸಮರಸದ ಜೀವನ ಹಾಗೂ ಸಾಮಾಜಿಕ ಕಳಕಳಿ ಇರುವ ಉತ್ತಮ ಮಕ್ಕಳ ನಿರ್ಮಾಣದಲ್ಲಿ ತೊಡಗಿರುವ ಪೋಷಕರಿಗೆ ಈ ಕಾರ್ಯಕ್ರಮವು ಸಹಕಾರಿಯಾಗಲಿದೆ.



ಡಾ|| ರಘುರಾಮ್‌ಜಿಯವರು ಬಿಪ್ ಶಾಲೆಯ ಮಕ್ಕಳ ಪೋಷಕರನ್ನು ಉದ್ದೇಶಿಸಿ ಮಾತನಾಡುತ್ತಿರುವುದು



ಹೋಲಿ ಚೈಲ್ಡ್ ಶಾಲೆಯ ಮಕ್ಕಳ ಪೋಷಕರು ಕಾರ್ಯಾಗಾರದಲ್ಲಿ ನಿರತರಾಗಿರುವುದು